2014-15ನೇ ಸಾಲಿನ ವರ್ಗಾವಣೆ ನಿಯಂತ್ರಣ ಅಧಿನಿಯಮಕ್ಕೆ ಸಂಬಂಧಿಸಿದಂತೆ ಮಾನ್ಯ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಇವರ ಕೊಠಡಿಯಲ್ಲಿ ಮಾನ್ಯ ಜಂಟಿ ನಿರ್ದೇಶಕರು (ಆಡಳಿತ) ಇವರ ಅಧ್ಯಕ್ಷತೆಯಲ್ಲಿ **ದಿನಾಂಕ: 01-08-2014 ರಂದು** ಸಂಜೆ **08.00** ಕ್ಕೆ ಸಭೆ ಕರೆಯಲಾಗಿ ನಡೆದ ನಡವಳಿಗಳು.

**ಸಭೆಗೆ ಹಾಜರಿದ್ದ ಅಧಿಕಾರಿಗಳು**

| ಕ್ರ. ಸಂ. | ಹೆಸರು ಮತ್ತು ಪದನಾಮ | |
|---|---|---|
| 1 | ಶ್ರೀ ಜಿ.ನಿರಂಜನ್ ದಾಸ್ ರಾಜ್ವಾನ್, ಜಂಟಿ ನಿರ್ದೇಶಕರು (ಆಡಳಿತ). | ಅಧ್ಯಕ್ಷರು |
| 2 | ಶ್ರೀ ಆರ್.ಮಂಜುನಾಥ್, ಜಂಟಿ ನಿರ್ದೇಶಕರು (ಪರೀಕ್ಷೆ). | ಸದಸ್ಯರು |
| 4 | ಶ್ರೀ ಡಿ.ವಿ.ಶ್ರೀನಿವಾಸಮೂರ್ತಿ, ಸಿಸ್ಟಂ ಅನಾಲಿಸ್ಟ್ | ಸದಸ್ಯರು |
| 5 | ಶ್ರೀ ಮಹಾದೇವಯ್ಯ, ಪ್ರೋಗ್ರಾಮರ್ | ಸದಸ್ಯರು |
| 6 | ಶ್ರೀ ವಿ.ಶ್ರೀನಿವಾಸ. ಹಿರಿಯ ತಾಂತ್ರಿಕ ಸಹಾಯಕರು | ಸದಸ್ಯರು |
| 7 | ಶ್ರೀ ಕಿರಣ್ ಕುಮಾರ್ ವಿ, ಉಪನ್ಯಾಸಕರು, | ತಂತ್ರಾಂಶ ತಯಾರಕರು |
| 8 | ಶ್ರೀ ಎಂ.ಎಸ್.ಶ್ರೀನಿವಾಸ್, ಉಪನ್ಯಾಸಕರು, | ತಂತ್ರಾಂಶ ತಯಾರಕರು |

1. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಡಿಟಿಇ/09/ಇಎಸ್‌ಟಿ(2)ಎ/2014 ದಿನಾಂಕ: 23-07-2014ರಲ್ಲಿ ಇಲಾಖೆಯ ಅಧೀನದಲ್ಲಿ ಬರುವ ನಿರ್ದೇಶನಾಲಯ / ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜು / ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿನ ಸಿಬ್ಬಂದಿ ವರ್ಗದವರ ವರ್ಗಾವಣೆಗೆ ಸಂಬಂಧಿಸಿದಂತೆ ವರ್ಗಾವಣೆ ಅರ್ಹರಾದ ಅಭ್ಯರ್ಥಿಗಳ ತಾತ್ಕಾಲಿಕ ಆದ್ಯತಾ ಪಟ್ಟಿಯನ್ನು ಪ್ರಕಟಿಸಿ, ಆಕ್ಷೇಪಣೆಗಳನ್ನು ಕರೆಯಲಾಗಿತ್ತು. ಸ್ವೀಕೃತವಾಗಿರುವ ಆಕ್ಷೇಪಣೆಗಳ ಬಗ್ಗೆ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನ ತೆಗೆದುಕೊಳ್ಳಲಾಯಿತು.

| ಕ್ರ ಸಂ | ಆಕ್ಷೇಪಣೆ ಸಲ್ಲಿಸಿರುವವರ ವಿವರ | ಸಲ್ಲಿಸಲಾಗಿರುವ ಆಕ್ಷೇಪಣೆ | ಷರಾ |
|---|---|---|---|
| 1. | ಪ್ರಾಂಶುಪಾಲರು, ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರಘಟ್ಟ, ಬೆಂಗಳೂರು ಇವರ ಮನವಿ ದಿ: 01.08.2014 | ಸಂಸ್ಥೆಯಲ್ಲಿ ಖಾಲಿ ಇರುವ ಸೌಂಡ್ ರೆಕಾರ್ಡಿಂಗ್ & ಇಂಜಿನಿಯರಿಂಗ್ ಮತ್ತು ಸಿನೆಮಾಟೋಗ್ರಫಿ ಉಪನ್ಯಾಸಕರ ಹುದ್ದೆಗಳಿಗೆದುರಾಗಿ ನಾಲ್ಕು ಮಂದಿ ಇ&ಇ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದು, ಸದರಿ ಉಪನ್ಯಾಸಕರು ಮೇಲ್ಕಂಡ ಎರಡೂ ಕೋರ್ಸುಗಳಲ್ಲಿ ನಿಗದಿಪಡಿಸಲಾಗಿರುವ ಎಲೆಕ್ಟ್ರಾನಿಕ್ಸ್ ವಿಷಯಗಳಲ್ಲಿನ ಥಿಯರಿ ಮತ್ತು ಪ್ರಾಯೋಗಿಕ ತರಗತಿಗಳಲ್ಲದೆ ಇನ್ನಿತರೆ ಸಾಮಾನ್ಯ ವಿಷಯಗಳಾದ Basic Electrical & Electronics Engg, CASP & BMSIC ವಿಷಯಗಳನ್ನು ಬೋಧಿಸುತ್ತಿರುತ್ತಾರೆ.<br>ಪ್ರಸ್ತುತ 2014-15ನೇ ಸಾಲಿನಲ್ಲಿ ಎರಡೂ ಕೋರ್ಸುಗಳ ಪ್ರವೇಶಾತಿಯು ಗಣನೀಯವಾಗಿ ಉತ್ತಮಗೊಂಡಿದ್ದು, ಸೌಂಡ್ ರೆಕಾರ್ಡಿಂಗ್ & ಇಂಜಿನಿಯರಿಂಗ್ ಹಾಗೂ ಸಿನೆಮಾಟೋಗ್ರಫಿ ಎರಡೂ ಕೋರ್ಸುಗಳಿಗೆ ಒಟ್ಟು 40 ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿರುತ್ತಾರೆ. ಆದಕಾರಣ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಬ್ಯಾಚುಗಳನ್ನು ಮಾಡಿ ಪ್ರಾಯೋಗಿಕ ತರಗತಿಗಳನ್ನು ನಡೆಸಬೇಕಾಗಿರುತ್ತದೆ. ಇದರಿಂದ ಅರೆಕಾಲಿಕ / ಅತಿಥಿ ಉಪನ್ಯಾಸಕರು ಹೆಚ್ಚಿನ ಅವಧಿಗೆ ಇಷ್ಟು ದೂರದಲ್ಲಿರುವ ಈ ಸಂಸ್ಥೆಗೆ ಬಂದು ಕಾರ್ಯನಿರ್ವಹಿಸುವುದು ಕಷ್ಟಕರವಾಗಿರುತ್ತದೆ.; ಈ ಸಂಸ್ಥೆಯಲ್ಲಿ ಬೋಧಿಸಲಾಗುವ ಕೋರ್ಸುಗಳು ವಿಶಿಷ್ಟವಾದ ಕೋರ್ಸುಗಳಾಗಿರುವುದರಿಂದ, ಬೇರೆ ಸಂಸ್ಥೆಗಳಲ್ಲಿ ಈ ಕೋರ್ಸುಗಳಿಗೆ ಸಂಬಂಧಿಸಿದ ಮೂಲ ಸೌಕರ್ಯಗಳು ಲಭ್ಯವಿಲ್ಲದ್ದರಿಂದ ಮತ್ತು | ಪ್ರಾಂಶುಪಾಲರ ಮನವಿಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಸಂಸ್ಥೆಯು ಸಿ ವಲಯದಲ್ಲಿದೆ. ಬೋಧನಾ ಕಾರ್ಯಭಾರ ಇರುವುದರಿಂದ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸಂಸ್ಥೆಯಲ್ಲಿ ಹುದ್ದೆಗೆದುರಾಗಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರನ್ನು ಸದರಿ ಸಂಸ್ಥೆಯಲ್ಲಿಯೇ ಮುಂದೆ ನೇರ ನೇಮಕಾತಿ ಮೂಲಕ ಹುದ್ದೆಗಳನ್ನು ಭರ್ತಿ ಮಾಡುವವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಬಹುದಾಗಿದೆಂದು ತೀರ್ಮಾನಿಸಲಾಯಿತು. |

| | | | |
|---|---|---|---|
| | | ಪ್ರಾಯೋಗಿಕ ತರಗತಿಗಳ ಬೋಧನೆಗಾಗಿ ಈ ಸಂಸ್ಥೆಯ ವಿದ್ಯಾರ್ಥಿಗಳನ್ನು ಬೇರೆ ಸಂಸ್ಥೆಗಳಿಗೆ ಕಳುಹಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಕೋರ್ಸುಗಳ ವಿಷಯಗಳ ಉಪನ್ಯಾಸಕರುಗಳ ನೇಮಕಾತಿಯಾಗುವವರೆಗೂ ಸಂಸ್ಥೆಯ ಅಭಿವೃದ್ಧಿ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮುಂದುವರೆಸಬೇಕೆಂದು ಕೋರಿರುತ್ತಾರೆ. | |
| 2. | ದಿ ಮಿನಿಸ್ಟ್ರಿಯಲ್ ಸ್ಟಾಫ್ ಅಸೋಸಿಯೇಷನ್ ಆಫ್ ದಿ ಡಿಪಾರ್ಟ್‌ಮೆಂಟ್ ಆಫ್ ಟೆಕ್ನಿಕಲ್ ಎಜುಕೇಷನ್, ಕರ್ನಾಟಕ(ರಿ) ಹಾಗೂ ಕರ್ನಾಟಕ ರಾಜ್ಯ ತಾಂತ್ರಿಕ ಶಿಕ್ಷಣ ಇಲಾಖೆಯ ಕುಶಲ ವೃತ್ತಿ ಶಿಕ್ಷಕರ ಸಂಘ, ಬೆಂಗಳೂರು ಇವರ ಮನವಿ ದಿನಾಂಕ: 26.07.2014 | ನಿರ್ದೇಶನಾಲಯ / ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜು ಹಾಗೂ ಕಿರಿಯ ತಾಂತ್ರಿಕ ಶಾಲೆಗಳು ಸೇರಿ ಒಟ್ಟು 89 ಸಂಸ್ಥೆಗಳಿದ್ದು, ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ವರ್ಗಾವಣೆಗೆ ಅರ್ಹರಾದವರ ಕುಶಲ ವೃತ್ತಿ ಶಿಕ್ಷಕ ನೌಕರರ ಸಂಖ್ಯೆಯು ತೀರಾ ಕಡಿಮೆ ಇರುವುದರಿಂದ ಆಡಳಿತಾತ್ಮಕ ಹಿತದೃಷ್ಟಿಯಿಂದ ಕುಶಲ ವೃತ್ತಿ ಶಿಕ್ಷಕ ನೌಕರರನ್ನು ವರ್ಗಾವಣೆಯಿಂದ ವಿನಾಯಿತಿ ನೀಡಲು ಕೋರುತ್ತಾರೆ. ಅಲ್ಲದೇ ಈಗಾಗಲೇ ಜುಲೈ ತಿಂಗಳು ಕೊನೆಯಾಗುತ್ತಿರುವುದರಿಮದ ಕುಶಲ ವೃತ್ತಿ ಶಿಕ್ಷಕ ನೌಕರರ ಮಕ್ಕಳುಗಳು ಶಾಲಾ ಕಾಲೇಜುಗಳಲ್ಲಿ ಪ್ರವೇಶ ಪಡೆದು ವ್ಯಾಸಂಗ ಮುಂದುವರೆಸುತ್ತಿರುವುದರಿಂದ ಈ ಸಮಯದಲ್ಲಿ ವರ್ಗಾವಣೆ ಮಾಡಿದಲ್ಲಿ ಅವರುಗಳ ಮುಂದಿನ ವ್ಯಾಸಂಗಕ್ಕೆ ತೊಂದರೆಯಾಗುವುದಲ್ಲದೆ ಮಕ್ಕಳೊಂದು ಕಡೆ, ತಂದೆ ತಾಯಿಗಳು ಒಂದು ಕಡೆ ವಾಸ್ತವ್ಯ ಹೂಡಬೇಕಾದ ಪ್ರಮೇಯ ಉದ್ಭವಿಸುವುದರಿಂದ ಆರ್ಥಿಕವಾಗಿ ತೊಂದರೆಗೆ ಒಳಗಾಗಿ ಸರ್ಕಾರಿ ಸೇವೆಯನ್ನು ಸ್ಫೂರ್ತಿದಾಯಕವಾಗಿ ಮಾಡಲು ಆಗದಿರುವುದರಿಂದ ಈ ಸಾಲಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಕುಶಲ ವೃತ್ತಿ ಶಿಕ್ಷಕ ನೌಕರರಿಗೆ ವರ್ಗಾವಣೆಯಿಂದ ವಿನಾಯಿತಿ ನೀಡುವಂತೆ ಕೋರುತ್ತಾರೆ. | ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳು 2013ಕ್ಕೆ ವಿರುದ್ಧವಾಗಿರುವುದರಿಂದ ಪರಿಗಣಿಸಲು ಅವಕಾಶವಿಲ್ಲವೆಂದು ಅಭಿಪ್ರಾಯಿಸಲಾಯಿತು. |
| | | ನಿರ್ದೇಶನಾಲಯದ ಸುತ್ತೋಲೆ ಸಂ: ಡಿಟಿಇ 9 ಇಎಸ್‌ಟಿ(2)ಎ 2014, ದಿ;23.07.2014ರಲ್ಲಿ ನೌಕರರು ಸೇವೆಗೆ ಸೇರಿದ ದಿನಾಂಕವನ್ನು ಪರಿಗಣಿಸಿ ಅರ್ಹತಾದಾಯಕ ಸೇವೆಯನ್ನು ವರ್ಗಾವಣೆಗೆ ಪರಿಗಣಿಸಲಾಗಿದ್ದು, ಇದು ಅಧಿನಿಯಮಕ್ಕೆ ವಿರುದ್ಧವಾಗಿದ್ದು ಪ್ರತಿ ಕೇಡರ್‌ನಲ್ಲಿ ಪ್ರಸ್ತುತ ಆಯಾ ಹುದ್ದೆಯಲ್ಲಿ ಸೇವೆ ಸಲ್ಲಿಸಿದ ದಿನಾಂಕವನ್ನು ವರ್ಗಾವಣೆಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಕೋರಿರುತ್ತಾರೆ. | ವರ್ಗಾವಣೆ ಅಧಿನಿಯಮ ಪ್ರಕರಣ 3ರಲ್ಲಿನ ಉಪಪ್ರಕರಣ(3)(ಬಿ)ಯ ವಿವರಣೆಯಲ್ಲಿ ನೀಡಿರುವಂತೆ ಆದ್ಯಾತಾ ಪಟ್ಟಿ ತಯಾರಿಸಲಾಗಿರುವುದು ಸರಿಯಾಗಿದೆ ಎಂದು ಅಭಿಪ್ರಾಯಿಸಲಾಯಿತು. |
| | | ಸರ್ಕಾರಿ ಅಧಿಸೂಚನೆ ದಿ:06.07.2013ರ ಅಧಿಸೂಚನೆಯಲ್ಲಿ ಹಾಗೂ ವರ್ಗಾವಣೆ ಕಾಯ್ದೆಯಲ್ಲಿ ಹಲವಾರು ದೋಷಗಳಿದ್ದು ಇದರಲ್ಲಿ ನಿಗದಿಪಡಿಸಿರುವ ಝೋನ್‌ಗಳು ಸರಿಯಿಲ್ಲದ ಪ್ರಯುಕ್ತ ಪುನರ್ ವಿಂಗಡಿಸುವುದು ಸೂಕ್ತವಾಗುದೆಂದು ಅಭಿಪ್ರಾಯ ಪಡೆಯಲಾಗಿದ್ದು, ಈ ಬಗ್ಗೆ ತಾವು ಪರಿಶೀಲಿಸಿ ಸರ್ಕಾರದ ಗಮನಕ್ಕೆ ತಂದು ಕಾಯ್ದೆ ತಿದ್ದುಪಡಿ ಆಗುವರೆಗೆ 2014-15ನೇ ಸಾಲಿನ ವರ್ಗಾವಣೆಯನ್ನು ತಡೆಹಿಡಿಯುವುದು ಸೂಕ್ತವಾಗಿರುತ್ತದೆಂದು ಸಂಘವು ಮನವಿ ಮಾಡುತ್ತದೆ. | ಈಗಾಗಲೇ ಸಂಸ್ಥೆಗಳನ್ನು ವಲಯವಾರು ವಿಂಗಡಿಸಿ ಅಂತಿಮಗೊಳಿಸಿ ಪ್ರಕಟಿಸಲಾಗಿದೆ ಎಂದು ಅಭಿಪ್ರಾಯಿಸಲಾಯಿತು. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 74 ಡಿಟಿಇ 2013, ದಿನಾಂಕ: 03-07-2014 2014-15ನೇ ಸಾಲಿಗೆ ವರ್ಗಾವಣೆ ಪ್ರಕ್ರಿಯೆಯನ್ನು ದಿನಾಂಕ: 06-08-2014ರೊಳಗೆ ಪೂರ್ಣಗೊಳಿಸಲು ಸೂಚಿಸಲಾಗಿದೆ. |
| | | ಸರ್ಕಾರದ ಅಧಿಸೂಚನೆ ಸಂ: 74 ಡಿಟಿಇ 2013 ದಿನಾಂಕ: 28.5.2014 ರಂದು ಹೊರಡಿಸಿದ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆಯ ನಿಯಂತ್ರಣ) ನಿಯಮಗಳು 2013ರ ಕರಡು ನಿಯಮಕ್ಕೆ ಸರ್ಕಾರಿ ಆದೇಶ ಸಂ: ಸಿಆಸುಇ 22 ಸೇನೌವ 2013, ದಿ:07.06.2013ರನ್ವಯ ಸರ್ಕಾರಿ ನೌಕರರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಯಾಗದ್ದಲಿ ಮಾತ್ರ ಅಂತಹ ನೌಕರರನ್ನು ಆ ಪದಾಧಿಕಾರಿಗಳ ಅವಧಿ ಮುಗಿಯುವವರೆಗೆ ವರ್ಗಾಯಿಸಬಾರದೆಂದು ಸ್ಪಷ್ಟ ನಿರ್ದೇಶನವಿರುವುದರಿಂದ ಸರ್ಕಾರಿ ನೌಕರರ ಸಂಘದಲ್ಲಿ ಪದಾಧಿಕಾರಿಗಳಾಗಿರುವ ನೌಕರರನ್ನು ವರ್ಗಾವಣೆಯಿಂದ ವಿನಾಯಿತಿ ನೀಡಿ ಸದರಿ ನಿಯಮದಲ್ಲಿ ಅಳವಡಿಸಿರುವುದಿಲ್ಲವಾದ್ದರಿಂದ ತಾಲ್ಲೂಕು ಜಿಲ್ಲಾ ಹಾಗೂ ಕೇಂದ್ರ | ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳು 2013ಕ್ಕೆ ಸರ್ಕಾರಕ್ಕೆ ಸಲ್ಲಿಸಲಾದ ಪ್ರಸ್ತಾವನೆಗೆ ಸಮ್ಮತಿ ದೊರೆಯದಿರುವ ಕಾರಣ ಪ್ರಸ್ತುತ ಜಾರಿಯಲ್ಲಿರುವ ನಿಯಮಗಳ ಅನುಸಾರ ಪರಿಗಣಿಸಲು ಅವಕಾಶವಿಲ್ಲವೆಂದು ಅಭಿಪ್ರಾಯಿಸಲಾಯಿತು. |

| | | | |
|---|---|---|---|
| | | ಸಂಘದಲ್ಲಿ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವ ನೌಕರರನ್ನು ಸರ್ಕಾರಿ ಆದೇಶ ದಿ:07.06.2013 ರಲ್ಲಿ ಸೂಚಿಸಿರುವ ಸ್ಪಷ್ಟ ನಿರ್ದೇಶನದಂತೆ ವರ್ಗಾವಣೆಯಿಂದ ವಿನಾಯಿತಿ ನೀಡುವಂತೆ ಕೋರಿರುವ ಬಗ್ಗೆ. | |
| 3. | ಮೇಜರ್ ಅನಿಲ್‌ಕುಮಾರ್.ಜಿ, ಎನ್.ಸಿ.ಸಿ ಅಧಿಕಾರಿ ಹಾಗೂ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು | ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಜಾರಿಗೆ ಬರುತ್ತಿರುವ ವರ್ಗಾವಣೆಯ ಕೌನ್ಸಿಲಿಂಗ್‌ನಲ್ಲಿ ಎನ್.ಸಿ.ಸಿ ಅಧಿಕಾರಿಗಳ ಸೇವೆಯ ಬಗ್ಗೆ ಮಾಹಿತಿ ಪಡೆದು ಅವರ ಸೇವೆಯಲ್ಲಿ ಪರಿಗಣಿಸಲಾಗುತ್ತಿದೆ. ಆದರೆ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಪ್ರಕಟಿಸಲಾಗಿರುವ ವರ್ಗಾವಣೆಯ ಕೌನ್ಸಿಲಿಂಗ್‌ನಲ್ಲಿ ಎನ್.ಸಿ.ಸಿ ಅಧಿಕಾರಿಗಳ ಸೇವೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಸರ್ಕಾರಿ ಆದೇಶ ಸಂ: ಇಡಿ 14 ರಾಯುಅ 2013 ಬೆಂಗಳೂರು ದಿನಾಂಕ: 11.11.2013 ಇದರ ಅಂಶಗಳನ್ನು ಪರಿಗಣಿಸಿ ಕಾಲೇಜು ಶಿಕ್ಷಣ ಇಲಾಖೆ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ ಎರಡೂ ಇಲಾಖೆಗಳು ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲೇ ಬರುವುದರಿಂದ ತಾಂತ್ರಿಕ ಶಿಕ್ಷಣ ಇಲಾಖೆ ಎರಡೂ ಇಲಾಖೆಗಳು ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲೇ ಬರುವುದರಿಂದ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಎನ್.ಸಿ.ಸಿ ಅಧಿಕಾರಿಗಳಿಗೆ ಆಗಿರುವ ತಾರತಮ್ಯವನ್ನು ಸರಿಪಡಿಸಿ ನಮ್ಮ ಎನ್.ಸಿ.ಸಿ ಸೇವೆಯನ್ನು ಸಹ ಗಣನೆಗೆ ತೆಗೆದುಕೊಂಡು ಎರಡೂ ಇಲಾಖೆಗಳನ್ನು ಸಮಾನವಾಗಿ ಪರಿಗಣಿಸಬೇಕಾಗಿ ಕೋರಲಾಗಿದೆ.<br>ಆದ್ಯತಾ ಪಟ್ಟಿಯಲ್ಲಿ ಅಭ್ಯರ್ಥಿಗಳು ಹಾಲಿ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅವಧಿಯನ್ನು ಸಹ ಪರಿಗಣಿಸಿ ಆದ್ಯತಾ ಪಟ್ಟಿಯನ್ನು ಪರಿಷ್ಕರಿಸಬೇಕೆಂದು ಕೋರಿರುತ್ತಾರೆ. | ಸದರಿಯವರು ಎಸ್‌ಸಿಸಿ ಅಧಿಕಾರಿಯಾಗಿಯೂ ಸಹ ಸೇವೆ ಸಲ್ಲಿಸುತ್ತಿದ್ದರೂ, ನಿಯಮಗಳಲ್ಲಿ ಸದರಿಯವರ ಕೋರಿಕೆಯನ್ನು ಪರಿಗಣಿಸಲು ಅವಕಾಶವಿಲ್ಲವೆಂದು ಅಭಿಪ್ರಾಯ ಪಡಲಾಯಿತು. |
| 4. | ಶ್ರೀ ಜಿ.ವೈ ಸತ್ಯನ್ ಪ್ರಾಚಾರ್ಯರು ಗ್ರೇಡ್-1 ಸರ್ಕಾರಿ ಪಾಲಿಟೆಕ್ನಿಕ್, ಸುರಪುರ | ಸದರಿಯವರ ಸೋದರ ಜಿ.ವೈ.ನರಸಿಂಹ (ವಯಸ್ಸು 50 ವರ್ಷಗಳು-ಅವಿವಾಹಿತರು) (ಮಾನಸಿಕ ಅಸ್ವಸ್ಥರು) ಇವರ ಪ್ರತಿನಿತ್ಯದ ಊಟ-ಉಪಚಾರ, ವೈದ್ಯಕೀಯ ಶುಶ್ರೂಷೆಯಿಂದ ಹಿಡಿದು ಎಲ್ಲ ಬಗೆಯ ದೈನಂದಿನ ಕಾರ್ಯಗಳನ್ನು ನಿರ್ವಹಿಸುವ ಜವಾಬ್ದಾರಿ ನನ್ನ ಮೇಲಿರುವುದರಿಂದ ಹಾಗೂ ಸರ್ಕಾರಿ ಪಾಲಿಟೆಕ್ನಿಕ್, ಸುರಪುರ ಇಲ್ಲಿ ನನ್ನ ಸಹೋದರನಿಗೆ ಅಗತ್ಯವಿರುವ ವೈದ್ಯಕೀಯ ಸೌಲಭ್ಯಗಳು ಇಲ್ಲದೇ ಇರುವುದರಿಂದ ಹಾಗು ನನ್ನ ಅನಾರೋಗ್ಯದಿಂದ ಬಳಲುತ್ತಿರುವುದರಿಂದ ವೈದ್ಯಕೀಯ ಕಾರಣ ವಿನಾಯ್ತಿ ಸೌಲಭ್ಯದಡಿ ವರ್ಗಾಯಿಸಲು ಕೋರಿರುತ್ತಾರೆ. | ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳು 2013 ರಲ್ಲಿ ಅವಕಾಶವಿರುವುದಿಲ್ಲವೆಂದು ಅಭಿಪ್ರಾಯಿಸಲಾಯಿತು. |
| 5. | ಶ್ರೀ ಶೇಖರ್, ಸಹಾಯಕ ನಿರ್ದೇಶಕರು(ಸಿಡಿಸಿ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು, ಇಲ್ಲಿ ನಾನ್-ಇಂಜಿನಿಯರಿಂಗ್ ವಿಭಾಗಕ್ಕೆ ಮೀಸಲಾದ ಪ್ರಾಂಶುಪಾಲರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂಜಿನಿಯರಿಂಗ್ ವಿಭಾಗದ ಪ್ರಾಂಶುಪಾಲರಾದ ಶ್ರೀ ಬಿ.ವಿಜಯಕುಮಾರ್ ಇವರನ್ನು ವರ್ಗಾಯಿಸುವ ಬಗ್ಗೆ | ನಾನ್-ಇಂಜಿಯರಿಂಗ್ ವಿಭಾಗಕ್ಕೆ ಮೀಸಲಾದ ಪ್ರಾಂಶುಪಾಲರು ಗ್ರೇಡ್-1 ಹುದ್ದೆಗೆದುರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಬಿ.ವಿಜಯಕುಮಾರ್ ಇವರ ಪ್ರಕರಣದಲ್ಲಿ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು. |
| 6. | ಡಾ॥ ಶಶಿಧರ್ ಎಸ್.ರಾಮತಾಳ್ , ಪ್ರಾಚಾರ್ಯರು, ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು | ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು, ಇಲ್ಲಿನ ಪ್ರಾಚಾರ್ಯರಾದ ಡಾ॥ ಶಶಿಧರ್ ಎಸ್.ರಾಮತಾಳ್ ಇವರನ್ನು ಹಾಗೂ ಬೋಧಕ ಸಿಬ್ಬಂದಿಯವನ್ನು ಸದರಿ ಸಂಸ್ಥೆಯಲ್ಲಿಯೇ ಮುಂದುವರೆಸುವ ಬಗ್ಗೆ. | ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು, ಈ ಸಂಸ್ಥೆಯಲ್ಲಿ ಮಾತ್ರ ಟೆಕ್ಸ್‌ಟೈಲ್ಸ್ ಕೋರ್ಸಿಗೆ ಸಂಬಂಧಿಸಿದಂತೆ ಬೋಧನೆ ಮಾಡಲಾಗುತ್ತಿರುವುದರಿಂದ, ಸದರಿ ಸಂಸ್ಥೆಯ ಬೋಧಕ ಸಿಬ್ಬಂದಿಯನ್ನು ವರ್ಗಾವಣೆ ಮಾಡಲು ಬರುವುದಿಲ್ಲ. ಸದರಿ ಸಂಸ್ಥೆಯ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವ ಡಾ॥ ಶಶಿಧರ್.ಎಸ್. ರಾಮತಾಳ್ ಇವರನ್ನು ಸದರಿ ಸ್ಥಳದಲ್ಲಿ ಮುಂದುವರೆಸುವ ಕುರಿತು ನಿರ್ದೇಶನಾಲಯದ ಪತ್ರ |

| | | | |
|---|---|---|---|
| | | | ಸಂಖ್ಯೆ: ಡಿಟಿಇ 15 ಇಎಸ್‌ಟಿ(10) 2014, ದಿನಾಂಕ: 01-08-2014ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಲ್ಲದೇ ವೃಂದ ಮತ್ತು ನೇಮಕಾತಿ ನಿಯಮ 2006 ಪ್ರಕಾರ ಎಸ್‌ಕೆಎಸ್‌ಜೆಟಿಐ ಸಂಸ್ಥೆಯ ಪ್ರಾಂಶುಪಾಲರ ಹುದ್ದೆಯು ಇಲಾಖೆಯ ಜಂಟಿ ನಿರ್ದೇಶಕರ ಹುದ್ದೆಗೆ ತತ್ಸಮಾನ ಹುದ್ದೆಯಾಗಿರುತ್ತದೆ. ಬೇರೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರ ಹುದ್ದೆಗೆ ವರ್ಗಾವಣೆ ಮಾಡಲು ಬರುವುದಿಲ್ಲ. ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಎಲ್ಲಾ ಪ್ರಾಂಶುಪಾಲರಿಗಿಂತ ಜೇಷ್ಠತೆಯಲ್ಲಿ ಹಿರಿಯರಾಗಿದ್ದು, ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿಗಳನ್ವಯ ಸದರಿ ಸಂಸ್ಥೆಯಲ್ಲಿಯೇ ಮುಂದುವರಿಸಲು ಕ್ರಮಜರುಗಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು. |
| 7. | ಶ್ರೀ ರಾಜೀವ್ ಪಿ. ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕಾರವಾರ. | ಪತಿ-ಪತ್ನಿ ಪ್ರಕರಣಗಳಲ್ಲಿ ಸರ್ಕಾರಿ / ಅರೆ ಸರ್ಕಾರಿ / ನಿಗಮ ಮಂಡಳಿ / ಇತ್ಯಾದಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಗಣಿಸುವ ಬಗ್ಗೆ. | ಪತಿ-ಪತ್ನಿ ಪ್ರಕರಣಗಳನ್ನು ಪರಿಗಣಿಸುವ ಸಂದರ್ಭದಲ್ಲಿ ಪತಿ-ಪತ್ನಿ ಇಬ್ಬರೂ ಸರ್ಕಾರಿ ಸೇವೆ ಸಲ್ಲಿಸುತ್ತಿರುವ ಅರ್ಜಿಗಳನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. |
| 8. | ಶ್ರೀ ಎಂ.ಅಭಿಲಾಷ್, ಪ್ರಾಂಶುಪಾಲರು ಗ್ರೇಡ್-2, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು | ಸದರಿಯವರು ದಿನಾಂಕ: 31.12.2014 ರಂದು ವಯೋನಿವೃತ್ತಿ ಹೊಂದುತ್ತಿರುವುದರಿಂದ, ನಿವೃತ್ತಿ ಹೊಂದುವ ಮೊದಲು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಲ್ಲಿನ ನಾನ್-ಇಂಜಿನಿಯರಿಂಗ್ ವಿಭಾಗಕ್ಕೆ ಮೀಸಲಾದ ಉಪನಿರ್ದೇಶಕರ ಹುದ್ದೆಗೆ ವರ್ಗಾವಣೆ ಮಾಡುವ ಬಗ್ಗೆ. | ಸದರಿಯವರ ಮನವಿಯನ್ನು ವರ್ಗಾವಣೆ ಅಧಿನಿಯಮ ವ್ಯಾಪ್ತಿಯಲ್ಲಿ ಬರುವುದಿಲ್ಲ. ಸರ್ಕಾರದ ಹಂತದಲ್ಲಿ ಪರಿಶೀಲಿಸಿ ಸ್ಥಳನಿಯುಕ್ತಿಗೊಳಿಸಲು ಸೂಕ್ತ ಕ್ರಮಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು. |
| 9. | ಶ್ರೀ ಮಾಧವಾಚಾರ್ಯ, ಸಹಾಯಕ ನಿರ್ದೇಶಕರು(ಪರೀಕ್ಷೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು | ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು, ಇಲ್ಲಿನ ಸಹಾಯಕ ನಿರ್ದೇಶಕರು(ಎಲ್‌ಆರ್‌ಡಿಸಿ) ಹುದ್ದೆಗೆದುರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎಂ.ರಘುನಾಥ್, ಇವರನ್ನು ವರ್ಗಾಯಿಸುವ ಬಗ್ಗೆ.<br>ಪ್ರಾಂಶುಪಾಲರು ಗ್ರೇಡ್-1, ಸಹಾಯಕ ನಿರ್ದೇಶಕರು ಮತ್ತು ವಿಷಯ ಪರಿವೀಕ್ಷಕರ ಹುದ್ದೆಗಳು ಸಮಾನಾಂತರ ಹುದ್ದೆಗಳಾಗಿದ್ದು, ಈ ಎಲ್ಲಾ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಪರಿಗಣಿಸಿ ವರ್ಗಾವಣೆಯ ಆದ್ಯತಾ ಪಟ್ಟಿ ಪ್ರಕಟಿಸುವಂತೆ, ಶ್ರೀ ಕರುಣಾಕರರೈ, ಶ್ರೀ ಕೃಷ್ಣಮೂರ್ತಿ.ಕೆ., ಶ್ರೀ ಟಿ.ಪ್ರಭಾಕರ್, ಶ್ರೀಮತಿ ರಾಗಿಣಿ ಮತ್ತು ಇತರರನ್ನು ಪ್ರಾಂಶುಪಾಲರು ಗ್ರೇಡ್-1 ಸಂಭ್ಯಾವ್ಯ ವರ್ಗಾವಣೆ ಪಟ್ಟಿಯಲ್ಲಿ ಸೇರಿಸುವಂತೆ ಕೋರಿರುವ ಬಗ್ಗೆ. | ಹುದ್ದೆಗೆದುರಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ವರ್ಗಾವಣೆ ನಿಯಮಗಳಂತೆ ವರ್ಗಾವಣೆ ಮಾಡಲು ತೀರ್ಮಾನಿಸಲಾಯಿತು.<br>ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು, ಇಲ್ಲಿನ ಉಪನಿರ್ದೇಶಕರು ಹುದ್ದೆಗೆದುರಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 39 ಡಿಟಿಇ 2013, ದಿನಾಂಕ: 08-02-2013ರಲ್ಲಿ ಪ್ರಾಂಶುಪಾಲರು ಗ್ರೇಡ್-1 ಹುದ್ದೆಯ ಜೇಷ್ಠತೆಯಲ್ಲಿ ಹಿರಿಯರಾದ ಅಧಿಕಾರಿಗಳಿಂದ ಸ್ಥಳನಿಯುಕ್ತಿಗೊಳಿಸಲಾಗಿದೆ. ಉಳಿದಂತೆ ಪ್ರಾಂಶುಪಾಲರು ಗ್ರೇಡ್-2 ಎಂದಿರುವುದನ್ನು ಪ್ರಾಂಶುಪಾಲರು ಗ್ರೇಡ್-1 ಎಂದು ಪರಿಗಣಿಸಲು ಒಪ್ಪಲಾಯಿತು. |
| 10 | ಕಂಪ್ಯೂಟರ್ ಸೈನ್ಸ್ ವಿಭಾಗದ ಉಪನ್ಯಾಸಕರ ಆಕ್ಷೇಪಣೆಗಳು | ಇನ್ಫಾರ್‌ಮೇಷನ್ ಸೈನ್ಸ್ ವಿಭಾಗದ ಉಪನ್ಯಾಸಕರು ಕಂಪ್ಯೂಟರ್ ಸೈನ್ಸ್ ವಿಭಾಗದೆದುರು ಕಾರ್ಯನಿರ್ವಹಿಸುತ್ತಿರುವುದನ್ನು ಆಕ್ಷೇಪಿಸಿರುವ ಬಗ್ಗೆ. | ಇನ್ಫಾರ್‌ಮೇಷನ್ ಸೈನ್ಸ್ ವಿಭಾಗದ 40 ಪಠ್ಯ ವಿಷಯಗಳ ಪೈಕಿ 37 ಪಠ್ಯ ವಿಷಯಗಳು ಕಂಪ್ಯೂಟರ್ ಸೈನ್ಸ್ ವಿಭಾಗದ ಪಠ್ಯ ವಿಷಯಗಳಿಗೆ ಸಮಾನವಾಗಿರುವುದರಿಂದ ಹುದ್ದೆಗೆದುರೆಂದು |

| | | | |
|---|---|---|---|
| | | | ಪರಿಗಣಿಸದಿರಲು ತೀರ್ಮಾನಿಸಲಾಯಿತು. |
| 11. | ಶ್ರೀ ಕೆ.ಜಿ.ಶಿವಶಂಕರರೆಡ್ಡಿ, ಆಯ್ಕೆಶ್ರೇಣಿ ಉಪನ್ಯಾಸಕರು, ಎಸ್.ಜೆ(ಸರ್ಕಾರಿ) ಸಂಜೆ ಪಾಲಿಟೆಕ್ನಿಕ್, ಬೆಂಗಳೂರು. | ದಿನಾಂಕ: 07-07-2014ಕ್ಕೆ ಒಂದು ವಲಯದ ಒಟ್ಟಾರೆ ಸೇವಾವಧಿ ಪರಿಗಣಿಸದೇ, ಒಂದು ಸ್ಥಳದಲ್ಲಿ ಗ್ರೂಪ್ ಬಿ ಹುದ್ದೆಗೆ ನಿಗಧೀ ಪಡಿಸಿರುವ ಕನಿಷ್ಠ ನಾಲ್ಕು ವರ್ಷ ಸೇವೆ ಪೂರೈಸಿರುವ ಉಪನ್ಯಾಸಕರ ಆದ್ಯಾತಾ ಪಟ್ಟಿ ಪ್ರಕಟಿಸುವ ಬಗ್ಗೆ. | ವರ್ಗಾವಣೆ ಅಧಿನಿಯಮ ಪ್ರಕರಣ 3ರಲ್ಲಿನ ಉಪಪ್ರಕರಣ(3)(ಬಿ)ಯ ವಿವರಣೆಯಲ್ಲಿ ನೀಡಿರುವಂತೆ ಆದ್ಯಾತಾ ಪಟ್ಟಿ ತಯಾರಿಸಲಾಗಿರುವುದು ಸರಿಯಾಗಿದೆ ಎಂದು ಅಭಿಪ್ರಾಯಿಸಲಾಯಿತು. |
| | | ಒಂದೇ ಸ್ಥಳದಲ್ಲಿ ನಾಲ್ಕು ವರ್ಷ ಪೂರೈಸಿದವರನನು ವರ್ಗಾವಣೆ ಆದ್ಯಾತಾ ಪಟ್ಟಿಯಲ್ಲಿ ಸೇರಿಸುವ ಬದಲಿಗೆ, ಒಂದೇ ವಲಯದಲ್ಲಿ ವರ್ಗಾವಣೆ ಮೂಲಕ ಸ್ಥಳ ಬದಲಾವಣೆ ಆಗಿರುವ ಉಪನ್ಯಾಸಕರನ್ನು ಅದೇ ವಲಯದಲ್ಲಿ ನಾಲ್ಕು ವರ್ಷ ಕನಿಷ್ಠ ಸೇವೆ ಪೂರೈಸಿರುವ ಮಾನದಂಡದಂತೆ ಆದ್ಯಾತಾ ಪಟ್ಟಿಯಲ್ಲಿ ಸೇರಿಸುವ ಬಗ್ಗೆ. | ಅಧಿನಿಮಯದ ಪ್ರಕರಣ 5ರನ್ವಯ ಒಂದು ವಲಯದ ಒಂದೇ ಸ್ಥಳದಲ್ಲಿ ನಿಯಮಿಸಲಾದ ವರ್ಷಗಳ ಸಂಖ್ಯೆಗಿಂತ ಹೆಚ್ಚು ಕಾಲ ನಿರಂತರವಾಗಿ ಸೇವೆ ಸಲ್ಲಿಸಿರುವ ಉಪನ್ಯಾಸಕರನ್ನು ವರ್ಗಾವಣೆ ಆದ್ಯಾತಾ ಪಟ್ಟಿಯಲ್ಲಿ ಸೇರಿಸಲಾಗಿರುವುದು ಸರಿ ಇರುವುದಾಗಿ ಅಭಿಪ್ರಾಯಿಸಲಾಯಿತು. |
| | | ತಾತ್ಕಾಲಿಕ ವರ್ಗಾವಣಾ ಆದ್ಯಾತಾ ಪಟ್ಟಿಯಲ್ಲಿ ಕೆಲವು ವಿಭಾಗಗಳಲ್ಲಿ ಕೆಲವು ಉಪನ್ಯಾಸಕರ ಹೆಸರುಗಳು ಇಲ್ಲದಿರುವುದು. | ನಿರ್ದೇಶನಾಲಯದಲ್ಲಿ ಲಭ್ಯವಿರುವ ದಾಖಲೆಗಳು ಹಾಗೂ ಹೆಚ್‌ಆರ್‌ಎಂಎಸ್ ದತ್ತಾಂಶದ ಪ್ರಕಾರ ಅರ್ಹ ಸಿಬ್ಬಂದಿಗಳ ಆದ್ಯಾತಾ ಪಟ್ಟಿಯನ್ನು ಪ್ರಕಟಿಸಲು ಕ್ರಮಜರುಗಿಸಲಾಗುವುದು. ತಪ್ಪು ಮಾಹಿತಿ ನೀಡಿದಲ್ಲಿ ಸಂಬಂಧಪಟ್ಟ ನೌಕರರು ಮತ್ತು ಕಛೇರಿ ಮುಖ್ಯಸ್ಥರ ಮೇಲೆ ಸಿಸಿಏ ನಿಯಮಾನುಗಳಾನುಸಾರ ಕ್ರಮಜರುಗಿಸಲು ತೀರ್ಮಾನಿಸಲಾಯಿತು. |
| | | ಸದರಿಯವರು ಹಿಂದೇ ಸೇವೆ ಸಲ್ಲಿಸಿರುವ ವಲಯಗಳ ಸ್ಥಳಗಳ ಸೇವಾವಧಿಗೆ ಕೃಪಾಂಕ (weightage) ನೀಡುವ ಬಗ್ಗೆ. | ವರ್ಗಾವಣೆ ಅಧಿನಿಯಮ ಪ್ರಕರಣ 3ರಲ್ಲಿನ ಉಪಪ್ರಕರಣ(3)(ಬಿ)ಯ ವಿವರಣೆಯಲ್ಲಿ ನೀಡಿರುವಂತೆ ಆದ್ಯತಾ ಪಟ್ಟಿ ತಯಾರಿಸಲಾಗಿರುವುದು ಸರಿ ಎಂದು ಅಭಿಪ್ರಾಯಿಸಲಾಯಿತು. |
| | | ವರ್ಗಾವಣೆ ಅಧಿನಿಯಮದ ಪ್ರಥಮ ಉದ್ದೇಶದಂತೆ ಸಿ ವಲಯದಲ್ಲಿ ಕಾರ್ಯನಿರ್ವಹಿಸದ ಉಪನ್ಯಾಸಕರನ್ನು ಗ್ರಾಮೀಣ ಪ್ರದೇಶಕ್ಕೆ ವರ್ಗಾವಣೆ ಮಾಡುವುದು ಕಡ್ಡಾಯವಾಗಿರುವುದರಿಂದ, ಬಿ ವಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರುಗಳು ಇದುವರೆವಿಗು ಸಿ ವಲಯದಲ್ಲಿ ಸೇವೆ ಸಲ್ಲಿಸದಿದ್ದಲ್ಲಿ ಅಂತವರನ್ನು ಮೊದಲು ಸಿ ವರ್ಗಕ್ಕೆ ವರ್ಗಾವಣೆ ಮಾಡುವ ಬಗ್ಗೆ. | ಬಿ ವಲಯದಿಂದ ಸಿ ವಲಯಕ್ಕೆ ಪರಿಗಣಿಸಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ ಎಂಬುದು ಸರಿ ಎಂದು ಅಭಿಪ್ರಾಯಿಸಲಾಯಿತು. |
| | | ಸದರಿಯವರು ವಲಯ 'ಬಿ'ಗೆ ಸೇರಿದ ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ, ಇಲ್ಲಿ ಸಲ್ಲಿಸಿದ ಸೇವಾವಧಿಗೆ ಸೂಕ್ತ ಕೃಪಾಂಕ ನೀಡಿ ಕ್ರಮ ಸಂಖೆ: 375ರಲ್ಲಿನ ನಮೂದಿಸಿರುವ ಸೇವಾನುಭವ 24.08ನ್ನು ಪರಿಷ್ಕರಿಸುವ ಬಗ್ಗೆ. | ವರ್ಗಾವಣೆ ಅಧಿನಿಯಮ ಪ್ರಕರಣ 3ರಲ್ಲಿನ ಉಪಪ್ರಕರಣ(3)(ಬಿ)ಯ ವಿವರಣೆಯಲ್ಲಿ ನೀಡಿರುವಂತೆ ಕ್ರಮಕೈಗೊಳ್ಳಲಾಗಿರುವುದು ಸರಿ ಇದೆ ಎಂದು ಅಭಿಪ್ರಾಯಿಸಲಾಯಿತು. |
| 12 | ಇ-ಮೇಲ್‌ನಲ್ಲಿ ಬಂದಿರುವಂತಹ ಆಕ್ಷೇಪಣೆಗಳು | ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ಜೇಷ್ಠತಾ, ಪಟ್ಟಿಯಲ್ಲಿ ಬದಲಾವಣೆ ಹಾಗೂ ಇನ್ನಿತರೇ ಬಗ್ಗೆ ಆಕ್ಷೇಪಣೆಗಳು. | ಸಕಾಲದಲ್ಲಿ ಸೇವಾ ವಿವರಗಳನ್ನು ತಿದ್ದುಪಡಿ ಮಾಡಲಾಗಿದೆ ಎಂಬುದನ್ನು ಒಪ್ಪಲಾಯಿತು. |
| 13 | ಸಭೆಯಲ್ಲಿನ ಚರ್ಚೆ ವಿಷಯ | ರಾಜ್ಯ ತಾಂತ್ರಿಕ ಶಿಕ್ಷಣ ಸಂಶೋಧನೆ ಮತ್ತು ಮಾಹಿತಿ ಕೇಂದ್ರ ಸಂಸ್ಥೆ (ಸ್ಟೇರಿಕ್), ಬೆಂಗಳೂರು, ಇಲ್ಲಿನ ಮುಖ್ಯ ಗ್ರಂಥಪಾಲಕರು, ಹುದ್ದೆಗೆದುರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಎಂ.ಮೀರಾಬಾಯಿ, ಇವರನ್ನು ವರ್ಗಾಯಿಸುವ ಬಗ್ಗೆ. | ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸ್ಟೇರಿಕ್‌ನ ಮುಖ್ಯ ಗ್ರಂಥಪಾಲರ ಹುದ್ದೆಯನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ನಿಯೋಜಿಸಬಹುದಾಗಿದೆ. ಸದರಿಯವರು ಗ್ರಂಥಾಲಯ ವಿಜ್ಞಾನ ಉಪನ್ಯಾಸಕರಾಗಿದ್ದು, ನಂತರ ಪ್ರಾಂಶುಪಾಲರ ಹುದ್ದೆಗೆ ಮುಂಬಡ್ತಿ ಹೊಂದಿರುತ್ತಾರೆ. ಸರ್ಕಾರಿ |

| | | | |
|---|---|---|---|
| | | | ಅಧಿಸೂಚನೆ ಸಂ: ಇಡಿ 367 ಡಿಟಿಇ 2012, ದಿ. 21-12-2012ರಲ್ಲಿ ವರ್ಗಾವಣೆಗೊಂಡಿರುವುದರಿಂದ, ಸದರಿಯವರನ್ನು ಇಲ್ಲಿಯೇ ಮುಂದುವರೆಸಲು ತೀರ್ಮಾನಿಸಲಾಯಿತು. |
| 14 | ಸಭೆಯಲ್ಲಿನ ಚರ್ಚೆ ವಿಷಯ | ವರ್ಗಾವಣೆ ಕೌನ್ಸಲಿಂಗ್‌ಗೆ ಹಾಜರಾಗುವ ಬೋಧಕ / ಬೋಧಕ ಸಿಬ್ಬಂದಿಯವರಿಗೆ ಅನ್ಯ ಕಾರ್ಯ ನಿಮಿತ್ತ ಅಥವಾ ರಜೆಯನ್ನು ಮಂಜೂರು ಮಾಡುವ ಬಗ್ಗೆ. | ಕೋರಿಗೆ ಮೇರೆಗೆ ವರ್ಗಾವಣೆ ಕೌನ್ಸಲಿಂಗ್‌ಗೆ ಹಾಜರಾಗುವ ಬೋಧಕ / ಬೋಧಕ ಸಿಬ್ಬಂದಿಯವರಿಗೆ ಅನ್ಯ ಕಾರ್ಯ ನಿಮಿತ್ತ ಎಂದು ಪರಿಗಣಿಸಲು ಅವಕಾಶಗಳಿರುವುದಿಲ್ಲ. ಸದರಿಯವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಕೊಳ್ಳಬಹುದಾಗಿದೆ. ಆದರೆ ಸಾರ್ವಜನಿಕ ಹಿತದೃಷ್ಟಿ ಮೇರೆಗೆ ವರ್ಗಾವಣೆ ಆದ ಪ್ರಕರಣಗಳಿಗೆ ಇದು ಅನ್ವಯಿಸುವುದಿಲ್ಲ ಎಂದು ತೀರ್ಮಾನಿಸಲಾಯಿತು. |

ಶ್ರೀ ಆರ್.ಮಂಜುನಾಥ್,
ಜಂಟಿ ನಿರ್ದೇಶಕರು
(ಪರೀಕ್ಷೆ).

ಶ್ರೀ ಡಿ.ವಿ.ಶ್ರೀನಿವಾಸಮೂರ್ತಿ
ಸಿಸ್ಟಂ ಅನಾಲಿಸ್ಟ್

ಶ್ರೀ ಮಹಾದೇವಯ್ಯ
ಪ್ರೋಗ್ರಾಮರ್

ಶ್ರೀ ವಿ.ಶ್ರೀನಿವಾಸ
ಹಿರಿಯ ತಾಂತ್ರಿಕ ಸಹಾಯಕರು

ಶ್ರೀ ಜಿ.ನಿರಂಜನ್ ದಾಸ್ ರಾಜ್ಬಾನ್,
ಜಂಟಿ ನಿರ್ದೇಶಕರು (ಆಡಳಿತ).